ಡಿ.ಎಲ್. ನಾಗರಾಜ್, ಚನ್ನಗಿರಿ

*ಎಣ್ಣೆ ಇಲ್ಲದೆ ಉರಿಯುವ ಜ್ಯೋತಿ...?*



ಯಾರೋ ಸರಿಯಾಗಿ ಬತ್ತಿ ಇಟ್ಟಿರಬೇಕು!

ವಿ. ಹಮೀದ್, ವಿಟ್ಲ

*ಒಬ್ಬ ಉತ್ತಮ ಲವರ್‌ಗೆ ಇರಬೇಕಾದ ಅರ್ಹತೆಗಳಾವುವು?*

ಮಾತು, ನಗೆ, ಮಾತಿಗೆ ಮುಂಚೆ ನಗೆ, ಸಮಯಕ್ಕೆ ತಕ್ಕಷ್ಟು ಅಳು.

ಬಿ.ಎಸ್.ನಾರಾಯಣಸ್ವಾಮಿ, ಬೋಧನಹೊಸಹಳ್ಳಿ

*ವಿಧಾನಸೌಧದಲ್ಲಿ ಸರ್ಕಾರದ ಕೆಲಸ ದೇವರ ಕೆಲಸ ಎಂದು ನಂಬಿದವರು ಇದ್ದಾರೆಯೆ?*

ಇದ್ದಾರಲ್ಲಾ... ಕೆಲವರು ನೈವೇದ್ಯ ದೊರೆಯುವವರೆಗೆ, ಇನ್ನು ಕೆಲವರು ಮಹಾಮಂಗಳಾರತಿ ಆಗುವವರೆಗೆ ಫಲ ನೀಡುವುದಿಲ್ಲ!

ಆರ್. ಮಧುಸೂದನ್, ಹಾಸನ

*ಹೆಣ್ಣಿನ ನಗುವೇ ಒಂದು ಸುಂದರ ಆಭರಣ. ಹೀಗಿರುವಾಗ ಹೆಣ್ಣಿಗೆ ಚಿನ್ನದ ಆಭರಣಗಳ ಆಸೆ ಏಕೆ?*



ಸರಿಯೇ... ಮೊಗಕ್ಕೆ ನಗೆ ಲೇಸು, ಕೊರಳಿಗೆ ನೆಕ್‌ಲೇಸು!

ಬಸವಣ್ಣ ಹೊನಖಾಂಡೆ, ಬಸವನ ಬಾಗೇವಾಡಿ

*ಹೆಣ್ಣು ಸರಳರೇಖೆ; ಗಂಡು...?*

ಜಾಮೆಟ್ರಿ ಮೇಷ್ಟ್ರು!

ಕಂಡಕ್ಟರ್ ರಾಜು, ಗುಬ್ಬಿ

*ಭಾರತ ದೇಶದ ನಾರಿ, ಎಲ್ಲೋಯ್ತು ನಿನ್ನ ಸ್ಯಾರಿ... ಎಂದು ಯಾರನ್ನು ಕೇಳಲಿ?*

ನಾರುಮುಡಿ, ಉತ್ತರೀಯ, ಹಣೆಯಲ್ಲಿ ತಿಲಕ ಧರಿಸಿ, ನಂತರ ಯಾರನ್ನು ಬೇಕಾದರೂ ಕೇಳಿ!

ಡಿ.ಎಸ್. ಪಂಕಜಸುಬ್ರಮಣ್ಯ, ಬೆಂಗಳೂರು

*ಹಿಂದೆ ಹೆಣ್ಣನ್ನು ಚಂದ್ರನಿಗೆ, ಹೂವಿಗೆ ಹೋಲಿಸುತ್ತಿದ್ದರು, ಈಗಿನ ಹುಡುಗಿಯರನ್ನು?*

ಸ್ಟ್ರಾಬೆರಿ ಕೆನ್ನೆ, ಟೊಮೆಟೊ ಸಾಸ್ ತುಟಿ, ನೂಡಲ್ಸ್ ಕೂದಲಿನವಳು!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

*ಖೈದಿಗಳನ್ನು ಸೆರೆಮನೆಯ ಬದಲು ಬೋನಿನಲ್ಲಿ ಹಾಕಿದರೆ?*

ನಿರಪರಾಧಿಗಳಾದ ನಮಗೂ ಬೋನು, ಪಾಪದ ಕೊಡವಾದ ನಿನಗೂ ಬೋನೇ? ಛಿ! ದೂರ ಸರಿ ಎಂದಿತಂತೆ ಒಂದು ಚಿಂಪಾಂಜಿ!

ಕಲಾವಿದ ಸೀನು, ಚಿತ್ರದುರ್ಗ

*ಈ ಭೂಮಿ ದುಂಡಾಗಿದೆ ಅನ್ನೋದಕ್ಕೆ ನಿಮ್ಮಲ್ಲಿ ಏನಾದ್ರೂ ಪುರಾವೆ ಇದೆಯಾ...?*

ಒಂದು ಕ್ವಾರ್ಟರ್ ಏರಿಸಿ, ಅದು ಗಿರ‍್ರನೆ ದುಂಡಾಗಿ ತಿರುಗುವುದು ನಿಮಗೇ ತಿಳಿಯುತ್ತದೆ!

ಚಿಕ್ಕೋಬನಹಳ್ಳಿ ಚಾಂದ್‌ಬಾಷ, ತಳಕು

*ತಡ ಮಾಡಿದಷ್ಟೂ ಹಣ ಸಿಗುವ ಸ್ಥಳ, ಬೇಗ ಮಾಡಿದಷ್ಟೂ ಹಣ ಸಿಗುವ ಸ್ಥಳಗಳು ಯಾವುವು?*

ಸರ್ಕಾರಿ ಕಚೇರಿ, ಕ್ಷೌರಿಕನ ಅಂಗಡಿ.

ಪಿ.ಎನ್.ಶ್ರೀವತ್ಸ, ಬೆಂಗಳೂರು

*ಅಕಾಲಿಕ ಮರಣಕ್ಕೂ, ಸಕಾಲಿಕ ಮರಣಕ್ಕೂ ಏನು ವ್ಯತ್ಯಾಸ?*

ಡಬಲ್ ಆಕ್ಸಿಡೆಂಟ್ ಬೆನಿಫಿಟ್ ಇರುವ ವಿಮೆ ಮಾಡಿಸಿದ ತಕ್ಷಣ ಸಾಯುವುದು ಸಕಾಲಿಕ, ವಿಮೆ ಮೆಚ್ಯೂರ್ ಆದ ಮೇಲೆ ಸಾಯುವುದು ಅಕಾಲಿಕ!

ಕೆ. ಹೊನ್ನಪ್ಪ, ಕ್ಯಾತ್ಸಂದ್ರ

*ಅವನದು ವಕ್ರದೃಷ್ಟಿ ಎನ್ನುತ್ತಾರೆ. ಹಾಗಿದ್ದರೆ ಬೇರೆ ಬೇರೆ ದೃಷ್ಟಿಗಳು ಯಾವುವು?*

ಡ್ರೈವರ್‌ದು ಚಕ್ರದೃಷ್ಟಿ, ನಟಿಯದು ನಖ್ರಾ ದೃಷ್ಟಿ, ಸ್ಟೂಡೆಂಟ್‌ದು ಪೆಕ್ರ ದೃಷ್ಟಿ!

ವೆಂಕಟೇಶ ಎಂ. ಮಹಾಲೆ, ಸಾಂಬ್ರಾಣಿ


*ಮಾತಲ್ಲಿ ಕನ್ನಡ, ಆದರೆ ಮಕ್ಕಳು ಕಾನ್ವೆಂಟಿಗೆ. ಏಕೆ?*

ಮಾ ತಲ್ಲಿ ಕನ್ನಡ ಎನ್ನುವುದೇ ನಮ್ಮ ತಾಯಿ ಕನ್ನಡ ಎಂಬುದರ ತೆಲುಗು ರೂಪ! ಬಹುಭಾಷಾ ಪ್ರಾವೀಣ್ಯ ಕನ್ನಡಿಗನ ಹುಟ್ಟುಗುಣ.

## ಬಹುಮಾನಿತ ಪ್ರಶ್ನೆ

ಎನ್.ಎ. ಶ್ರೀನಾಥ್, ಕತ್ತರಗುಪ್ಪ

*ಆಟೋದಲ್ಲಿ ಪಯಣಿಸಿದ ಗರ್ಭಿಣಿಗೆ ನಾರ್ಮಲ್ ಡೆಲಿವರಿ, ನರ್ಸಿಂಗ್‌ಹೋಂನಲ್ಲಿ ಸಿಸೇರಿಯನ್; ಹೀಗೇಕೆ?*




ಆಟೋ ಛಾರ್ಜ್‌ನಲ್ಲಿ ಸಿಸೇರಿಯನ್ ಮಾಡಲಾಗುವುದಿಲ್ಲ!

ಎ.ಕೆ. ಪಟ್ಟಾಭಿ, ಬೆಂಗಳೂರು

*ಬ್ರಹ್ಮ ಅಳಿಸಲಾಗದಂತಹ ಹಣೆಬರಹವನ್ನು ಯಾವ ಇಂಕ್‌ನಲ್ಲಿ ಬರೆಯುತ್ತಾನೆ?*

ವಿಧಿ ಬ್ರ್ಯಾಂಡ್ ಇಂಕ್‌ನಲ್ಲಿ!

ಕಾಳೀಹುಂಡಿ ಶಿವಕುಮಾರ್, ಮೈಸೂರು

*ಜೀವನ ಪೂರ್ತಿ ಯೌವ್ವನವೇ ಇರುವಂತಾದರೆ ಹೇಗಿರುತ್ತೆ ರಾಮ್‌ಜೀ?*

ಹದಿಹರೆಯದ ಗಾತ್ರದ ಮಗುವನ್ನು ಹೆರಲು ತಾಯಿಗೆ ಬಹಳ ತ್ರಾಸವಾಗುತ್ತದೆ!

ಸಾರಂಗ್, ಬೆಂಗಳೂರು

*ಇಂದಿನ ಚೂರಿಚಿಕ್ಕಣ್ಣ ವಿದ್ಯಾರ್ಥಿಗಳನ್ನು ನೋಡಿದರೆ ಟೀಚರ್ ಆಗಲು ಭಯವಾಗುತ್ತಲ್ಲಾ...?*

ಲಾಂಗ್ ದೊಡ್ಡಣ್ಣ ಆಗಿಬಿಡಿ, ಇಡೀ ಸಿಸ್ಕಕೋಟೆಯೇ ನಿಮ್ಮ ಬಾಲ ಆಗುತ್ತದೆ!

ಕೆ. ಮೈಥಿಲಿಕೃಷ್ಣ, ಬೆಂಗಳೂರು

*ರಾಜಕಾರಣಿಗಳಿಗೆ ಬೇಕಾದಾಗ ಬರುವುದು, ಬೇಡವೆಂದಾಗ ಮಾಯವಾಗುವುದು ಯಾವುದು?*

ಮೊಸಳೆಕಣ್ಣೀರು!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಇಂದುಶ್ರೀಯ ಮಾತನಾಡುವ ಬೊಂಬೆ ಡಿಂಕುವಿಗೂ, ನಮ್ಮ ಪ್ರಶ್ನೆಗೆ ಉತ್ತರಿಸುವ ನಿಮಗೂ ಇರುವ ವ್ಯತ್ಯಾಸ, ಸಂಬಂಧ ಏನು?*

ನನ್ನದು ಬರೀ ವಾಕ್ಯ; ಇಂದುಶ್ರೀಯ, ಡಿಂಕುವಿನದು ದೃಶ್ಯಕಾವ್ಯ. ನಮ್ಮಿಬ್ಬರಿಗೂ ಹಾಸ್ಯವೇ ಸೇತು!

■ ರಾಮ್